ಮೈಸೂರ ಗೆಜೆಟ್.

ಸರ್ಕಾರದಿಂದ ಘೋಷಿಸಿದ್ದು.

ಬೆಂಗಳೂರು, ಶನಿವಾರ, ಏಪ್ರಿಲ್ ತಾ॥ 2, ಸ್ಯ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಜೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೩ನೇ ಭಾಗ.

1887ನೇ ಇಸವಿಯ 1ನೇ ನಂ. ರೆಗ್ಯುಲೇಷ್ಯನ್.

ಇದರಡಿಕಂಡ ರೆಗ್ಯುಲೇಷ್ಯನಾನೆ ನಿಬಂಧನೆಯು 1887ನೇ ಇಸವಿ ಮಾರ್ಚಿ 5ನೇ ಮುರ್ಕುವಿನಲ್ಲಿ ಘನವನ್ನು ಹೊಂದಿದ ಶ್ರೀಮನ್ಮಹಾರಾಜ ರಾಜಾಸಾಹೆಬ ಬಹದೂರವರಿಂದ ಮಂಜೂರ್ಮಾಡಲ್ಪಟ್ಟು ಸಕಲಜನಗಳ ತಿಳುವಳಿಕೆಯಬಗ್ಗೆ ಇದರಡಿ ಪ್ರಕಟಿಸಲ್ಪಟ್ಟಿರುತಿದೆ:—

ಬೆಂಗಳೂರು ಷಹರನಲ್ಲಿ ಬಾಡಿಗೆಗಾಡಿಗಳ ವ್ಯವಸ್ಥೆ ಮತ್ತು ವಿಚಾರಣೆಯಬಗ್ಗೆ ಹುಟ್ಟಿದ ನಿಬಂಧನೆಯು.

ಬೆಂಗಳೂರು ಷಹರನಲ್ಲಿ ಬಾಡಿಗೆ ಗಾಡಿಗಳ ವ್ಯವಸ್ಥೆ ಮತ್ತು ವಿಚಾರಣೆಯಬಗ್ಗೆ ವಿಧಿಸಬೇಕಾದದ್ದು ಅವಶ್ಯಕವಾಗಿರುವದರಿಂದ, ಘನವನ್ನು ಹೊಂದಿದ ಶ್ರೀಮನ್ಮಹಾರಾಜ ರಾಜಾ ಸಾಹೆಬ ಬಹದೂರವರು ಇದರಡಿಕಂಡಂತೆ ನಿಬಂಧಿಸಿರುತ್ತಾರೆ:—

ಪೀಠಿಕೆ.

ಚಿಕ್ಕ ಹೆಸರು.

1. ಈ ನಿಬಂಧನೆಯು, "1887ನೇ ಇಸವಿಯ ಬೆಂಗಳೂರು ಷಹರ್ ಬಾಡಿಗೆ ಗಾಡಿಗಳ ರೆಗ್ಯುಲೇಷ್ಯನ್" (Bangalore City Hackney Carriage Regulation) ಎಂದು ಕರೆಯಲ್ಪಡಬಹುದು.

ಸ್ಥಳವ್ಯಾಪ್ತಿ. ಪ್ರಾರಂಭ.

ಅದು ಬೆಂಗಳೂರು ಷಹರಿಗೆ ವ್ಯಾಪಿಸಿ ಕೂಡಲೇ ಜಾರಿಯಲ್ಲಿ ಬರತಕ್ಕದ್ದು.

2. ಈ ರೆಗ್ಯುಲೇಷನಿನಲ್ಲಿ, "ಬಾಡಿಗೆ ಗಾಡಿ" ಯೆಂದರೆ ಪ್ರಯಾಣಸ್ಥರ ಸಂಚಾರದ ಉಪಯೋಗಾರ್ಥ, ಬಾಡಿಗೆಗಾಗಿ ಇಡಲ್ಪಟ್ಟಿರುವ ಅಥವಾ ಕೊಡುವಂತೆ ಹೇಳಲ್ಪಡುವ ಅಥವಾ ನಡೆಸುವ, ಚಕ್ರಗಳುಳ್ಳ ಮತ್ತು ಜಾನ್ವರ್‌ಗಳಿಂದ ಎಳೆಯಲ್ಪಡತಕ್ಕ ಯಾವದಾದರೊಂದು ಗಾಡಿಯೆಂದರ್ಥವು.

3. ಬೆಂಗಳೂರು ಷಹರ್ ಮ್ಯೂನಿಸಿಪಲ್ ಕಮ್ಮಿಷನರ್‌ಗಳು, ಆಗಿಂದಾಗ್ಗೆ, ಸದರೀ ಮ್ಯೂನಿಸಿಪಾಲಿಟಿಯ ಸರಹದ್ದಿನೊಳಗೆ ಬಾಡಿಗೆ ಗಾಡಿಗಳ ವ್ಯವಸ್ಥೆಯ ಮತ್ತು ವಿಚಾರಣೆಯಬಗ್ಗೆ ತತ್ಕಾಲದೊಳು ಜಾರಿಯಲ್ಲಿರುವ

ಕಾನೂನನುಸರಿಸಿ, ಸದರೀ ಸರಹದ್ದುಗಳೊಳಗಣ ಇತರ ವಿಷಯಗಳ ವ್ಯವಸ್ಥೆ ಮತ್ತು ವಿಚಾರಣೆಯ ಬಗ್ಗೆ ಮಾಡಲ್ಪಡುವ ಬೈಲಾಯಾನೆ ಉಪನಿಬಂಧನೆಗಳ ರೀತಿಯನ್ನನುಸರಿಸಿ ನಿಬಂಧನೆಗಳನ್ನು ಮಾಡಬಹುದು.

ಈ ಪ್ರಕರಣವನ್ನನುಸರಿಸಿ ಮಾಡಲ್ಪಟ್ಟ ಪ್ರತಿ ನಿಬಂಧನೆಯೂ ಮೈಸೂರು ಗವರ್ನಮೆಂಟಿನವರಿಂದ ಖಾಯಂ ಮಾಡಲ್ಪಟ್ಟ ಬಳಿಕ ಅವರು ಆಗಿಂದಾಗ್ಗೆ ವಿಧಿಸಬಹುದಾದ ಕಾಲದತನಕ ಮತ್ತು ರೀತಿಯಂತೆ ಫಾಯಿಷ್ ಮಾಡಲ್ಪಟ್ಟು ಕಾನೂನಿನ ಶಕ್ತಿಯುಳ್ಳದ್ದಾಗಿರತಕ್ಕದ್ದು.

ಪರಂತು ಮೈಸೂರು ಗವರ್ನಮೆಂಟಿನವರು ಯಾವಕಾಲದಲ್ಲಾದರೂ ಅಂತಾ ನಿಬಂಧನೆಯನ್ನು ರದ್ದುಮಾಡಬಹುದು.

4. 3ನೇ ಪ್ರಕರಣವನ್ನನುಸರಿಸಿ, ಮಾಡಲ್ಪಡತಕ್ಕ ನಿಬಂಧನೆಗಳು, ಇತರ ವಿಷಯಗಳನ್ನಲ್ಲದೆ,—

(*a.*) ಯಾವ ಬಾಡಿಗೆ ಗಾಡಿಯಾಗಲಿ, ಅಥವಾ ಗೊತ್ತಾದ ತರಹಾವಿನ ಯಾವ ಬಾಡಿಗೆ ಗಾಡಿಯಾಗಲಿ, ಆ ಬಗ್ಗೆ, ಈ ರೆಗ್ಯುಲೇಷನಿಗೆ ಅಥವಾ ಬೆಂಗಳೂರು ಬಾಡಿಗೆ ಗಾಡಿಗಳ ರೆಗ್ಯುಲೇಷನಿಗೆ ಅನುಸಾರವಾಗಿ ಕೊಡಲ್ಪಟ್ಟ ಲೈಸೆನ್ಸು ಮೀರಿಗೆಹೊರತು, ಬಾಡಿಗೆಗೆ ಕೊಡಕೂಡದೆಂತಲೂ, ಸವಾರಿಗೆ ತೆಗದುಕೊಳ್ಳಲಾಗದೆಂತಲೂ, ಬಾಡಿಗೆಗೆ ಕೊಡುವಂತೆ ಹೇಳಕೂಡದೆಂತಲೂ ವಿಧಿಸಬಹುದು;

(*b.*) ಈ ರೆಗ್ಯುಲೇಷನಿಗೆ ಅಥವಾ ಬೆಂಗಳೂರು ಬಾಡಿಗೆ ಗಾಡಿಗಳ ರೆಗ್ಯುಲೇಷನಿಗೆ ಅನುಸಾರವಾಗಿ ಕೊಡಲ್ಪಟ್ಟ ಲೈಸೆನ್ಸಿನಂತೆವಿನಾ ಯಾವ ಮನುಷ್ಯನೂ, ಬಾಡಿಗೆ ಗಾಡಿಯನ್ನು ನಡೆಸತಕ್ಕವನಾಗಿರಕೂಡದೆಂದು ವಿಧಿಸಬಹುದು;

(*c.*) (*a*) ಮತ್ತು (*b*) ಕ್ಲಾಜ್‌ಗಳಲ್ಲಿ ನಮೂದಾಗಿರುವ ಲೈಸೆನ್ಸುಗಳು ಕೊಡುವದನ್ನೂ, ಅಂತಾ ಲೈಸೆನ್ಸುಗಳು ಯಾವದಾದರೂ ಷರತ್ತುಗಳಮೇಲೆ ಕೊಡಲ್ಪಡತಕ್ಕದ್ದಾಗಿರುವದನ್ನೂ ಮತ್ತು ಅದಕ್ಕಾಗಿ (ಯೇನಾದರಿದ್ದರೆ) ಕೊಡಬೇಕಾದ ರುಸುಂಗಳ ನಿಬಂಧನೆಯನ್ನೂ ವಿಧಿಸಬಹುದು;

(*d.*) ಲೈಸೆನ್ಸು ಪಡೆದ ಗಾಡಿಗಳಿಗೆ ಉಪಯೋಗಿಸಲ್ಪಡತಕ್ಕ ಜರ್ಜಾವರ್‌ಗಳು, ಹಾರ್ನೆಸ್‌ಯಾನೆ ಸರಂಜಾಂ ಮತ್ತು ಇತರ ಪದಾರ್ಥಗಳು, ಇವುಗಳ ವಿವರಣೆಯನ್ನೂ ಅಂತಾ ಗಾಡಿಗಳು ಮತ್ತು ಅವುಗಳಿಗೆ ಉಪಯೋಗಿಸಲ್ಪಡತಕ್ಕ ಜರ್ಜಾವರ್‌ಗಳು, ಸರಂಜಾಂ ಮತ್ತು ಇತರ ಪದಾರ್ಥಗಳು ಇವು ಇಡಲ್ಪಡಬೇಕಾದ ಸ್ಥಿತಿಯನ್ನೂ ಮತ್ತು ಸೂರ್ಯಾಸ್ತಮಾನಾನಂತರ ಮತ್ತು ಸೂರ್ಯೋದಯಾತ್ಪೂರ್ವ (ಯೇನಾದರೂ ಯಿದ್ದರೆ) ಬಯ್ಯಲ್ಪಡಬೇಕಾದ ಬೆಳಕುಗಳನ್ನೂ ಕ್ರಮಪಡಿಸಬಹುದು;

(*e.*) ಅಂತಾ ಗಾಡಿಗಳು, ಜರ್ಜಾವರ್‌ಗಳು, ಸರಂಜಾಂ ವಗೈರೆ ಪದಾರ್ಥಗಳಿಡಲ್ಪಡತಕ್ಕ ಕಟ್ಟಡದ ತನಿಖೀ ಬಗ್ಗೆ ವಿಧಿಸಬಹುದು;

(*f.*) ಸದರೀ ಲೈಸೆನ್ಸುಗಳು ಯಾವತ್ಪರ್ಯಂತ ಜಾರಿಯಲ್ಲಿರತಕ್ಕದ್ದೋ ಅಂತಾ ಕಾಲವನ್ನೂ ಮತ್ತು (ಯಾವದಾದರಿದ್ದರೆ) ಸದರೀ ಕಾಲದೊಳಗಾಗಿ ಆ ಲೈಸೆನ್ಸುಗಳನ್ನು ರದ್ದು ಯಾ ಅಮಾನತ್ತಿಗೆ ಒಳಪಡಿಸತಕ್ಕ ಸಂಭವಗಳನ್ನೂ ಗೊತ್ತು ಮಾಡಬಹುದು;

(*g.*) ಅಂತಾ ಗಾಡಿಗೆ ನಂಬರ್ ಹಾಕುವಂತೆ ವಿಧಿಸಬಹುದು;

(*h*). ಬಾಡಿಗೆ ಗಾಡಿಗಳ ನಿಟ್ಟುಕೊಂಡಿರುವ ಪ್ರತಿ ಮನುಷ್ಯನೂ ಸದರೀ ಗಾಡಿಯನ್ನು ಅಪೇಕ್ಷಿಸತಕ್ಕ ಇತರ ಯಾವಮನುಷ್ಯನಿಗಾಗಲಿ ಅದನ್ನು ಬಾಡಿಗೆಗೆ ಕೊಡಲಿಕ್ಕೂ, ಕೊಡದೆ ನಿರಾಕರಿಸಲಿಕ್ಕೂ ಯಾವಕಾಲಗಳಲ್ಲಿ ಮತ್ತು ಯೆಂತಾಸಂದರ್ಭಗಳಲ್ಲಿ ಬದ್ಧನಾಗಿರತಕ್ಕದ್ದೆಂಬದನ್ನು ನಿರ್ಣೈಸಬಹುದು;

(*i.*) ಬಾಡಿಗೆ ಗಾಡಿಗಳು ನಿಲ್ಲಿಸಲ್ಪಡಬೇಕಾದ ಸ್ಟ್ಯಾಂಡ್ಸ್‌ಯಾನೆ ಸ್ಥಾನಗಳನ್ನು ಮೊಕರರ್ರಾಡಬಹುದು; ಮತ್ತು ಅಂತಾ ಸ್ಥಾನಗಳಲ್ಲಿವಿನಾ ಅನ್ಯತ್ರ ಸದರೀ ಗಾಡಿಗಳು ಬಾಡಿಗೆಯ ಬಗ್ಗೆ ಕಾದಿರಕೂಡದೆಂದು ನಿರೋಧಿಸಲೂಬಹುದು;

(*j.*) ಯಾವದಾದರೊಂದು ಬಾಡಿಗೆ ಗಾಡಿಯ ಬಗ್ಗೆ ಕೇಳಲ್ಪಡುವ ಬಾಡಿಗೆಯ ದರ ಅಥವಾ ಮೊಬಲಗನ್ನು ಕಾಲಕ್ಕೂ, ಘಾಸಲೆಗೂ ತಕ್ಕಂತೆ ಗೊತ್ತುಮಾಡಬಹುದು; ಮತ್ತು ಸದರೀ ಗಾಡಿಗಳು ಕಾಲಕ್ಲುಪ್ತಿಯಿಂದ ಬಾಡಿಗೆಗೆ ಗೊತ್ತಾದಮೇಲೆ ಕನಿಷ್ಟಪಕ್ಷ ಇಷ್ಟರ ವೇಗದೊಡನೆಯೇ ನಡಿಸಲ್ಪಡತಕ್ಕದ್ದೆಂದು ವಿಧಿಸಬಹುದು;

(*k.*) ಅಂತಾ ಯಾವದಾದರೊಂದು ಗಾಡಿಯಲ್ಲಿ ಹತ್ತತಕ್ಕ ಜನಗಳ ಸಂಖ್ಯೆಯನ್ನೂ, ಅದರಲ್ಲಿ ತೆಗದುಕೊಂಡು ಹೋಗಬಹುದಾದ ಸ್ವತ್ತಿನ ತೂಕವನ್ನು ಸಹ ಗೊತ್ತುಮಾಡಬಹುದು;

(*l.*) ಅಂತಾ ಯಾವದಾದರೊಂದು ಗಾಡಿಯ ಮಾಲಿಕನು ಅಥವಾ ಅದನ್ನು ಸ್ವಾಧೀನದೊಳಿಟ್ಟುಕೊಂಡಿರುವ ಮನುಷ್ಯನು, ಬಾಡಿಗೇ ದರಗಳ ಪಟ್ಟಿಯನ್ನು ಇಂಗ್ಲೀಷ್ ಭಾಷೆಯಲ್ಲಿ ಮತ್ತು ವಿಧಿಸಲ್ಪಡಬಹುದಾದಂತಾ ಇತರ ಭಾಷೆಯಲ್ಲಿ ಸಹ ಛಾಪಿಸಿ ಅದನ್ನು ಗಾಡಿಯೊಳಗೆ ರೂಲ್ಸ್‌ಗಳಿಂದ ಗೊತ್ತುಮಾಡಲ್ಪಡತಕ್ಕ ಪ್ರದೇಶದಲ್ಲಿ ಜಿಕಟಾಯಿಸುವಂತೆ ನಿಯಮಿಸಬಹುದು. ಮತ್ತು ಅಂತಾ ಪಟ್ಟಿಯನ್ನು ನಾಶ ಪಡಿಸದೆ ಅಥವಾ ವಿರೂಪಗೊಳಿಸದಿರುವಂತೆ ನಿರೋಧಿಸಬಹುದು;

(*m.*) ಗಾಡಿ ನಡಿಸುವವರು, ನಂಬರ್ ಹಾಕಲ್ಪಟ್ಟ ಬಿಲ್ಲೆ ಅಥವಾ ಟಿಕ್ಕೆಟನ್ನು ಧರಿಸುವಂತೆಯೂ, ಅವರ ಲೈಸೆನ್ಸುಗಳನ್ನು ಒಬ್ಬ ಮ್ಯಾಜಿಸ್ಟ್ರೇಟರು ಅಥವಾ ಈ ಬಗ್ಗೆ ರೂಲ್ಸ್‌ಗಳ ಮೂಲಕ ಅಧಿಕಾರಹೊಂದಿದ ಇತರ ಮನುಷ್ಯನು ಅಪೇಕ್ಷಿಸಿದಾಗ ಹಾಜರ್ಮಾಡುವಂತೆಯೂ ನಿಯಮಿಸಬಹುದು. ಮತ್ತು ಅಂತಾ ಲೈಸೆನ್ಸುಗಳು ವ ಬಿಲ್ಲೆಗಳು ವರ್ಗ ಅಥವಾ ಎರವಲು ಕೊಡಲ್ಪಡಕೂಡದೆಂದು ನಿರೋಧಿಸಬಹುದು; ಮತ್ತು

(*n.*) ಅಂತಾ ಗಾಡಿಗಳಲ್ಲಿ ದೊರೆಯತಕ್ಕ ಸ್ವತ್ತನ್ನು ಅಮಾನತ್ತಿಡುವಂತೆಯೂ, ಮತ್ತು ಅಂತಾ ಸ್ವತ್ತು ಕರ್ತನಿಗೆ ಆ ಮಾಲನ್ನೊಪ್ಪಿಸುವಾಗ್ಯೆ ಆತನು ರುಸುಮನ್ನು ಕೊಡುವಂತೆಯೂ ವಿಧಿಸಬಹುದು.

5. (1) ಮೇಲೆ ಕಂಡ 3ನೇ ಪ್ರಕರಣಾನುಗುಣವಾದ ನಿಬಂಧನೆಗಳನುಸರಿಸಿ ಕೊಡಲ್ಪಟ್ಟ ಲೈಸೆನ್ಸು, ಬೆಂಗಳೂರು ಸಿವಿಲ್ ವ ಮಿಲಿಟರಿಸ್ಟೇಷನಿನಲ್ಲಾಗಲಿ, ಅಥವಾ ಬೆಂಗಳೂರು ಷಹರ್‌ನಲ್ಲಾಗಲಿ, ಸಂಗತ್ಯಾನುಸಾರವಾಗಿ ಜಾರಿಯಲ್ಲಿರುವ ಕಾರ್ಯರೀತ್ಯಾ ಯಾವ ಸಂದರ್ಭದಲ್ಲಿ ರದ್ದು ಯಾ ಅಮಾನತ್ತಿಗೆ ಗುರಿಯಾಗಿರುತ್ತೋ ಅಂತಾ ಸಂದರ್ಭದಲ್ಲಿಯೂ, ಮತ್ತು ಲೈಸೆನ್ಸು ಕೊಡಲ್ಪಡುವ ಬಗ್ಗೆ ಏರ್ಪಟ್ಟ ರೂಲ್ಸ್‌ನಲ್ಲಿ ನಮೂದಾಗಿರುವ ಸಂದರ್ಭದಲ್ಲಿಯೂ, ಸದರೀ ಲೈಸೆನ್ಸು ರದ್ದು ಯಾ ಅಮಾನತ್ತಿಗೆ ಒಳಪಡತಕ್ಕದ್ದು.

(2.) ಈ ರೆಗ್ಯುಲೇಷನಿಗೆ ಅನುಗುಣವಾಗಿ ಮಾಡಲ್ಪಟ್ಟ ಯಾವ ನಿಬಂಧನೆಗಾಗಲಿ ವ್ಯತಿರಿಕ್ತವಾಗಿ ನಡೆದುಕೊಳ್ಳುವ ಯಾವ ಮನುಷ್ಯನಾದರೂ ೫೦ ರೂಪಾಯಿಗಳವರಿಗಿನ ಜುಲ್ಮಾನೆಮೂಲಕ ಶಿಕ್ಷಿಸಲ್ಪಡತಕ್ಕದ್ದು.

6. ಈ ರೆಗ್ಯುಲೇಷನನ್ನು ಜಾರೀಯಲ್ಲಿ ತರುವದರೊಳು ಹುಟ್ಟುವಳಿಯಾಗುವ ಯಾವದಾದರು ರುಸುಂ ಮೊಬಲಗೂ, ತಗಲುವ ಲಾಗವಡು ಮೊಬಲಗೂ ಕ್ರಮವಾಗಿ ಬೆಂಗಳೂರು ಷಹರ್ ಮ್ಯುನಿಸಿಪಲ್ ಫಂಡಿನ ಲೆಕ್ಕದಲ್ಲಿ ಜಮೆಯಾಖರ್ಚು ಮಾಡಲ್ಪಡತಕ್ಕದ್ದು.

7. ಯಾವದಾದರು ಬಾಡಿಗೆ ಗಾಡಿಯು ಬಾಡಿಗೇದಾರನಿಗೂ ಅಂತಾ ಗಾಡಿಯು ಸ್ವಂತಗಾರ ಅಥವಾ ಗಾಡಿ ನಡೆಸತಕ್ಕವನಿಗೂ, ಈ ರೆಗ್ಯುಲೇಷ್ಸ ಅನುಸರಿಸಿ ಮಾಡಲ್ಪಟ್ಟ ಯಾವದಾದರೊಂದು ನಿಬಂಧನೆಯಮೇಲೆ ಅಂತಾ ಬಾಡಿಗೇದಾರನಿಂದ ಕೊಡಲ್ಪಡಬೇಕಾದ ಬಾಡಿಗೇ ಮೊಬಲಗಿನ ವಿಷಯದಲ್ಲಿ ಏನಾದರು ತಕರಾರ್ ವುಂಟಾದರೆ ಆ ತಕರಾರ್‌ದಾರರ ಪೈಕಿ ಯಾರೇಲಗಲಿ, ಆ ಮೇರೆ ಅಪೇಕ್ಷಿಸಿದಲ್ಲಿ ಸದರೀ ತಕರಾರ್ ಬೆಂಗಳೂರು ಷಹರ್‌ನಲ್ಲಿ ಯಾವ ಮ್ಯಾಜಿಸ್ಟ್ರೇಟರ ಯಾ ಮ್ಯಾಜಿಸ್ಟ್ರೇಟರ ಬೆಂಚ್‌ಯಾನೆ ಸಮುದಾಯದವರ ಸ್ಥಳಾಧಿಕಾರ ಸರಹದ್ದಿಗೆ ಒಳಪಟ್ಟಿರುತ್ತದೆಯೋ ಅಂತವರಿಂದ ದರ್‍ಯಾಫ್ತೀಮೂಲಕ ವ್ಯವಸ್ಥೆಯಾಗತಕ್ಕದ್ದಾಗಿರುತ್ತೆ. ಮತ್ತು ಅಂತಾ ಮ್ಯಾಜಿಸ್ಟ್ರೇಟರು ಯಾ ಸಮುದಾಯದವರು ಹಾಗೆ ತಕರಾರ್‌ನಲ್ಲಿರುವ ಬಾಡಿಗೇ ಮೊಬಲಗನ್ನು ವ್ಯವಸ್ಥೆ ಮಾಡುವದಲ್ಲದೆ ಅಂತಾ ಮ್ಯಾಜಿಸ್ಟ್ರೇಟರಿಗೆ ಅಥವಾ ಸಮುದಾಯದವರಿಗೆ ಯುಕ್ತವೆಂದು ತೋರುವಷ್ಟು ಮೊಬಲಗನ್ನು ಕಾಲವನ್ನು ವ್ಯರ್ಥಗೊಳಿಸಿದ ಬಗ್ಗೆ ಪರಿಹಾರಕವಾಗಿ ತಕರಾರ್‌ದಾರರ ಪೈಕಿ ಯೊಬ್ಬನು ಮತ್ತೊಬ್ಬನಿಗೆ ಕೊಡುವಂತೆ ಹುಕ್ಕುಂ ಮಾಡಬಹುದು.

ಈ ಪ್ರಕರಣವನ್ನನುಸರಿಸಿ ಸಲ್ಲಬೇಕೆಂದು ನಿರ್ಣಯವಾದ ಅಥವಾ ಕೊಡುವಂತೆ ಹುಕುಮಾದ ಯಾವ ಮೊಬಲಗೇಯಾಗಲಿ ಜುರ್ಮಾನೆಮೊಬಲಗಾಗಿದ್ದರೆ ಹ್ಯಾಗೋ ಹಾಗೆ ವಸೂಲ್ಮಾಡಲ್ಪಡತಕ್ಕದ್ದು.

ಈ ಪ್ರಕರಣವನ್ನನುಸರಿಸಿ ಯಾವ ಮೊಕದ್ದಮೆಯಲ್ಲಾಗಲಿ, ಅಂತಾ ಮ್ಯಾಜಿಸ್ಟ್ರೇಟರಿಂದ ಅಥವಾ ಸಮುದಾಯದವರಿಂದ ಮಾಡಲ್ಪಡುವ ನಿರ್ಣಯವು ಲಿಖಿತವಾಗಿರತಕ್ಕದ್ದು.

ಅಂತಾ ಯಾವದಾದರೊಂದು ಮೊಕದ್ದಮೆಯು ಮ್ಯಾಜಿಸ್ಟ್ರೇಟ್ ಸಮುದಾಯದವರಿಂದ ದರ್‍ಯಾಫ್ತಿ ಮಾಡಲ್ಪಡುವಾಗ್ಯೆ ಅಂತಾ ಮ್ಯಾಜಿಸ್ಟ್ರೇಟ್ ಸಮುದಾಯದ ಮೆಂಬರ್‌ಗಳಲ್ಲಿ ಭಿನ್ನಾಭಿಪ್ರಾಯ ವುಂಟಾದರೆ ಕ್ರಿಮಿನಲ್ ಮೊಕದ್ದಮೆಗಳ ವಿಚಾರಣೆಯಲ್ಲಿ, ಅಂತಾ ಮೆಂಬರುಗಳೊಳು ಭಿನ್ನಾಭಿಪ್ರಾಯಗಳು ವುಂಟಾದರೆ ಅವು ಹ್ಯಾಗೆ ವ್ಯವಸ್ಥೆ ಮಾಡಲ್ಪಡುವವೋ ಹಾಗೆಯೇ ವ್ಯವಸ್ಥೆ ಮಾಡಲ್ಪಡತಕ್ಕದ್ದು.

8. ಯಾವಕಾಲದಲ್ಲಾಗಲಿ 7ನೇ ಪ್ರಕರಣದೊಳು ನಮೂದಿಸಲ್ಪಟ್ಟಿರುವ ಯಾವದಾದರು ತಕರಾರ್ ವುಂಟಾದರೆ, ಅಂತಾ ತಕರಾರ್ ವಿಷಯದಲ್ಲಿ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟಾದರೂ, ಕೋರ್ಟು ಮಾಡುತ್ತಲಿದ್ದರೆ, ಗಾಡಿಯ ಬಾಡಿಗೇದಾರನು ಸದರೀ ಪ್ರಕರಣವನ್ನನುಸರಿಸಿ ಅರ್ಜೀ ಕೊಡಬೇಕ್ಕ ಬಗ್ಗೆ ಅಂತಾ ಮ್ಯಾಜಿಸ್ಟ್ರೇಟರ ಕೋರ್ಟಿಗೆ ತನ್ನನ್ನು ಅದೇ ಗಾಡಿಯಲ್ಲಿ ಕರೆದುಕೊಂಡು ಹೋಗುವಂತೆ ಸದರೀ ಗಾಡಿ ನಡೆಸುವವನನ್ನು ಅಪೇಕ್ಷಿಸಬಹುದು.

ಅಂತಾ ಅಪೇಕ್ಷೆಯನ್ನು ನಡಿಸಲು, ಉಪೇಕ್ಷಿಸುವ ಅಥವಾ ನಿರಾಕರಿಸುವ ಗಾಡಿ ನಡೆಸತಕ್ಕವನ್ಯಾವನಾದರೂ ಒಂದು ತಿಂಗಳವರಿವಿಗೆ ಶಿಕ್ಷೆದು ಸಜಾ ಮೂಲಕವಾಗಲಿ, ೫೦ ರೂಪಾಯಿಗಳಿಗೆ ಮಿಗದ ಜುರ್ಮಾನೆಯಮೂಲಕವಾಗಿಯಾಗಲಿ, ಅಥವಾ ಎರಡರಮೂಲಕವಾಗಿಯಾಗಲಿ ದಂಡಿಸಲ್ಪಡತಕ್ಕದ್ದು.

9. ಈ ರೆಗ್ಯುಲೇಷ್ಸ ಅನುಸರಿಸಿ ಯಾವದಾದರು ಬಾಡಿಗೇ ಗಾಡಿಯಲ್ಲಿ ಸವಾರಿ ಹೋಗತಕ್ಕ ಯಾವ ಮನುಷ್ಯನೇಯಾಗಲಿ, ಮನಃಪೂರ್ವಕವಾಗಿಯಾದರೂ, ಅಥವಾ ಅಸ್ರದ್ಧೆಯಿಂಪಲಾದರೂ ಸದರೀ ಗಾಡಿಗೆ ನಷ್ಟ ವುಂಟುಮಾಡಿದರೆ ಅವನು ೬೦ ರೂಪಾಯಿಗಳತನಕ ಒಂದು ಜುರ್ಮಾನೆಮೂಲಕ ಶಿಕ್ಷಿಸಲ್ಪಡತಕ್ಕದ್ದಲ್ಲದೆ ಬಾಡಿಗೆ ಬಂಡಿಯ ಸ್ವಂತಗಾರನಿಗೆ ನಷ್ಟದಬಗ್ಗೆ ಪರಿಹಾರ ದ್ರವ್ಯ ಕೊಡತಕ್ಕದ್ದು. ಸದರೀ ಪರಿಹಾರದ್ರವ್ಯದ ಮೊತ್ತವು ದಂಡಿಸತಕ್ಕ ಮ್ಯಾಜಿಸ್ಟ್ರೇಟರಿಂದ ಗೊತ್ತುಮಾಡಲ್ಪಟ್ಟು ಜುರ್ಮಾನೆ ತರೀಕ್ ವಸೂಲ್ಮಾಡಲ್ಪಡತಕ್ಕದ್ದು.

ಕೆ. ಶೇಷಾದ್ರಿಅಯ್ಯರ್,
ಮೈಸೂರು ಸಂಸ್ಥಾನದ ದಿವಾ.

Mysore Government Press, Bangalore.— 1887.